ಸಾಧನೆಯ ಹಿಂದೆ ಸತತ ಸೋಲುಗಳ ಸರಮಾಲೆಯಿದೆ. ಹೆಚ್ಚು ಪೈಪೋಟಿಯೇ ಇರದ, ಬಲಿಷ್ಠ ತಂಡಗಳು ಪಾಲ್ಗೊಳ್ಳದ ಏಸಿಸಿ ಏಷ್ಯಾ ಕಪ್, ಏಷ್ಯನ್ ಕ್ರೀಡಾಕೂಟ, ಕಾಮನ್‌ವೆಲ್ತ್ ಕ್ರೀಡಾಕೂಟಗಳಲ್ಲಿ ಮೇಲಿಂದ ಮೇಲೆ ನಿರಾಸೆ ಅನುಭವಿಸಿದ ಇತಿಹಾಸವಿದೆ. ಈ ಸೋಲುಗಳ ಅನುಭವ ಬಾಂಗ್ಲಾ ಹುಲಿಗಳನ್ನು ಗಟ್ಟಿಗೊಳಿಸಿದೆ. ಅನುಭವ ಪಕ್ವವಾಗುವಂತೆ ಮಾಡಿದೆ. ಇದರಿಂದ ಚಾಂಪಿಯನ್ನರು ವಿಶ್ವಕಪ್‌ನಲ್ಲಿ ಲೀಗ್ ಹಂತದಿಂದ ಎಲ್ಲ ಪಂದ್ಯಗಳಲ್ಲಿಯೂ ಗೆಲುವು ಸಾಧಿಸಿದ್ದಾರೆ.

ಬಾಂಗ್ಲಾದೇಶದ ಸೀನಿಯರ್ ತಂಡದ ಪ್ರಮುಖ ಆಟಗಾರರಾದ ಮುಷ್ಫಿಕರ್ ರಹೀಮ್, ಶಕೀಬ್ ಅಲ್ ಹಸನ್, ತಮೀಮ್ ಇಕ್ಬಾಲ್, ಮೊಹಮ್ಮದ್ ಅಶ್ರಫುಲ್, ಅಫ್ತಾಬ್ ಅಹ್ಮದ್, ನಾಫೀಸ್ ಇಕ್ಬಾಲ್, ಶಹದಂತ್ ಹೊಸೈನ್, ಸೌಮ್ಯ ಸರ್ಕಾರ್, ಮುಸ್ತಫಿಜರ್ ರಹಮಾನ್, ಮಶ್ರುಫೆ ಮುರ್ತಜಾ, ತಸ್ಕಿನ್ ಅಹ್ಮದ್, ಶಬ್ಬೀರ್ ರಹಮಾನ್ ಮತ್ತು ಹಸನ್ ಮಿರ್ಜಾ ಈ ಎಲ್ಲ ಆಟಗಾರರು 19 ವರ್ಷದ ಒಳಗಿನವರ ರಾಷ್ಟ್ರೀಯ ತಂಡದಿಂದ ಅರಳಿದ ಪ್ರತಿಭೆಗಳು. ಇವರೆಲ್ಲರೂ ಹಾಕಿಕೊಟ್ಟ ಗಟ್ಟಿ ಬುನಾದಿಯ ಮೇಲೆ ತಂಡ ಈಗ ಚಾಂಪಿಯನ್ ಆಗಿ ರೂಪುಗೊಂಡಿದೆ.

## ಬೌಲಿಂಗ್ ಶಕ್ತಿ

ಬಾಂಗ್ಲಾದೇಶ ತಂಡ ಲೀಗ್ ಹಂತದಲ್ಲಿ 'ಸಿ' ಗುಂಪಿನಲ್ಲಿ ಸ್ಥಾನ ಹೊಂದಿತ್ತು. ಇದೇ ಗುಂಪಿನಲ್ಲಿ ಎರಡು ಬಾರಿಯ ಚಾಂಪಿಯನ್ ಪಾಕಿಸ್ತಾನ, ಅಷ್ಟೇನೂ ಬಲಿಷ್ಠವಲ್ಲದ ಜಿಂಬಾಬ್ವೆ ಮತ್ತು ಕ್ರಿಕೆಟ್ ಲೋಕದ ಲಿಲ್ಲಿಪುಟ್ ಸ್ಕಾಟ್ಲೆಂಡ್ ತಂಡಗಳಿದ್ದವು. ಲೀಗ್‌ನಲ್ಲಿ ಮೂರೂ ಪಂದ್ಯಗಳಲ್ಲಿ ಗೆದ್ದ ಬಾಂಗ್ಲಾ ತಂಡ ಗುಂಪಿನಲ್ಲಿ ಅಗ್ರಸ್ಥಾನ ಸಂಪಾದಿಸಿ ಸೂಪರ್ ಲೀಗ್ ಕ್ವಾರ್ಟರ್ ಫೈನಲ್‌ನಲ್ಲಿ 2014ರ ಟೂರ್ನಿಯ ಚಾಂಪಿಯನ್ ದಕ್ಷಿಣ ಆಫ್ರಿಕಾವನ್ನು 104 ರನ್‌ಗಳಿಂದ ಮಣಿಸಿತ್ತು.





**ಬಾಂಗ್ಲಾದೇಶ ಕ್ರಿಕೆಟ್ ಮಂಡಳಿ ನಿರಂತರವಾಗಿ ಕ್ರಿಕೆಟ್‌ಗೆ ಸಂಬಂಧಿಸಿದ ಸೌಲಭ್ಯಗಳನ್ನು ಒದಗಿಸುತ್ತಿದೆ. ಇದಕ್ಕಾಗಿ ಕೋಟ್ಯಂತರ ಹಣ ಹೂಡಿಕೆ ಮಾಡುತ್ತಿದೆ. ವಿವಿಧ ದೇಶಗಳ ನುರಿತ ಕೋಚ್‌ಗಳನ್ನು ನೇಮಿಸಿ ತಮ್ಮ ದೇಶದ ತಂಡವನ್ನು ಬಲಿಷ್ಠಗೊಳಿಸುತ್ತಿದೆ. ಮಂಡಳಿಯ ಈ ದಿಟ್ಟ ಪ್ರಯತ್ನದಿಂದಲೇ ಬಾಂಗ್ಲಾ ತಂಡ 19 ವರ್ಷದ ಒಳಗಿನವರ ಐಸಿಸಿ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಚಾಂಪಿಯನ್ ಆಗಿದೆ.**

ಸೂಪರ್ ಲೀಗ್ ಸೆಮಿಫೈನಲ್‌ನಲ್ಲಿ ನ್ಯೂಜಿಲೆಂಡ್ ಎದುರು ಗೆಲುವು ಸಾಧಿಸಿ ಫೈನಲ್ ಪ್ರವೇಶಿಸಿತ್ತು. ವಿಶೇಷವೆಂದರೆ ನ್ಯೂಜಿಲೆಂಡ್ ಎದುರಿನ ಪಂದ್ಯವನ್ನು ಹೊರತುಪಡಿಸಿ ಉಳಿದ ಯಾವ ಪಂದ್ಯಗಳಲ್ಲಿಯೂ ಬಾಂಗ್ಲಾದೇಶ ತಂಡ ಎದುರಾಳಿಗೆ 200ಕ್ಕಿಂತಲೂ ಹೆಚ್ಚು ರನ್ ಗಳಿಸಲು ಅವಕಾಶ ನೀಡಲಿಲ್ಲ. ಚುರುಕಿನ ಬೌಲಿಂಗ್ ಮತ್ತು ಕರಾರುವಾಕ್ಕಾಗಿ ಫೀಲ್ಡಿಂಗ್ ಬಾಂಗ್ಲಾ ತಂಡದ ಯಶಸ್ಸಿಗೆ ಪ್ರಮುಖ ಕಾರಣವಾಯಿತು.

ಬಲಿಷ್ಠ ಬ್ಯಾಟಿಂಗ್ ಶಕ್ತಿ ಹೊಂದಿರುವ ಭಾರತ ತಂಡದ ಬ್ಯಾಟ್ಸ್‌ಮನ್‌ಗಳನ್ನು ಬಾಂಗ್ಲಾ ಬೌಲರ್‌ಗಳು ಫೈನಲ್‌ನಲ್ಲಿ ಚಾಣಾಕ್ಷತನಕದಿಂದ ಕಟ್ಟಿಹಾಕಿದರು. ಒಂದೂ ಪ್ರಥಮ ದರ್ಜೆ ಪಂದ್ಯವಾಡದ ರಕಿಬುಲ್ ಹಸನ್ ಟೂರ್ನಿಯಲ್ಲಿ ಒಟ್ಟು 12 ವಿಕೆಟ್ ಪಡೆದು ಈ ಬಾರಿಯ ಟೂರ್ನಿಯಲ್ಲಿ ಬಾಂಗ್ಲಾ ಪರ ಹೆಚ್ಚು ವಿಕೆಟ್ ಉರುಳಿಸಿದ ಕೀರ್ತಿಗೆ ಪಾತ್ರರಾದರು. ತಂಜೀಮ್ ಹಸನ್ ಶಕೀಬ್, ಅಭಿಷೇಕ್ ದಾಸ್ ಕೂಡ ಒಂದೂ ಪ್ರಥಮ ದರ್ಜೆ ಪಂದ್ಯಗಳಲ್ಲಿ ಆಡಿಲ್ಲ. ಎರಡು ವರ್ಷಗಳ ಹಿಂದೆಯಷ್ಟೇ ಪ್ರಥಮ ದರ್ಜೆ ಪಂದ್ಯಗಳನ್ನು ಆಡಿರುವ ಶೋರಿಫುಲ್ ಇಸ್ಲಾಮ್ ಟೂರ್ನಿಯುದ್ದಕ್ಕೂ ಮಿಂಚಿದರು. ಹೋದ ವರ್ಷವಷ್ಟೇ ಲಿಸ್ಟ್ 'ಎ' ಪಂದ್ಯವಾಡಿದ್ದ ಅಕ್ಬರ್ ಅಲಿ ಬಾಂಗ್ಲಾ ತಂಡವನ್ನು ಮುನ್ನಡೆಸಿದ್ದರು.

## ಕ್ರಿಕೆಟ್ ಬೆಳವಣಿಗೆಗೆ ಟ್ರೋಫಿ ಇಂಬು

ಭಾರತದಲ್ಲಿ ಕ್ರಿಕೆಟ್ ಅನ್ನು ಧರ್ಮ ಎಂದು ಹೇಗೆ ಆರಾಧಿಸುತ್ತಾರೊ, ಅದೇ ರೀತಿ ಬಾಂಗ್ಲಾದಲ್ಲಿಯೂ ಕ್ರಿಕೆಟ್‌ಗೆ ಘನತೆಯ ಸ್ಥಾನ ತಂದುಕೊಟ್ಟಿದ್ದು ಅಲ್ಲಿನ ಕ್ರಿಕೆಟ್ ಮಂಡಳಿ. ಈಗ ಗೆದ್ದಿರುವ ವಿಶ್ವಕಪ್ ಆ ದೇಶದಲ್ಲಿ ಕ್ರಿಕೆಟ್ ಇನ್ನಷ್ಟು ಬೆಳೆಯಲು ಪ್ರೇರಣೆಯಾಗಲಿದೆ. ಕ್ರಿಕೆಟ್ ಸಂಸ್ಕೃತಿ ಬೆಳೆಸಲು ನೆರವಾಗಲಿದೆ.

ಬಾಂಗ್ಲಾ ಕ್ರಿಕೆಟ್ ಮಂಡಳಿ 2004 ಮತ್ತು 2016ರಲ್ಲಿ 19 ವರ್ಷದ ಒಳಗಿನವರ ವಿಶ್ವಕಪ್ ಟೂರ್ನಿಗೆ ಆತಿಥ್ಯ ವಹಿಸಿತ್ತು. 2011ರಲ್ಲಿ ಭಾರತ ಮತ್ತು ಶ್ರೀಲಂಕಾ ಸಹಯೋಗದಲ್ಲಿ ಐಸಿಸಿ ಏಕದಿನ ವಿಶ್ವಕಪ್ ಟೂರ್ನಿ ಸಂಘಟಿಸಿತ್ತು. 2014ರಲ್ಲಿ ಐಸಿಸಿ ವಿಶ್ವ ಟಿ–20 ಟೂರ್ನಿಯನ್ನು ಅಚ್ಚುಕಟ್ಟಾಗಿ ನಡೆಸಿತ್ತು.

ಬಾಂಗ್ಲಾದಲ್ಲಿ ಮೇಲಿಂದ ಮೇಲೆ ಕ್ರಿಕೆಟ್ ಟೂರ್ನಿಗಳು ಹಾಗೂ ಸರಣಿಗಳು ನಡೆಯುತ್ತಿರುವ ಕಾರಣ ಈ ಆಟವನ್ನು ನೆಚ್ಚಿಕೊಂಡು ಬರುವ ಹೊಸ ಪ್ರತಿಭೆಗಳ ಸಂಖ್ಯೆ ಹೆಚ್ಚಾಗುತ್ತಲೇ ಇದೆ. 'ಮಿಲಿಯನ್ ಡಾಲರ್ ಬೇಬಿ' ಖ್ಯಾತಿಯ ಐಪಿಎಲ್‌ನಲ್ಲಿಯೂ ಅಲ್ಲಿನ ಆಟಗಾರರಿಗೆ ಅವಕಾಶ ಸಿಕ್ಕಿದೆ. ಹಣ, ಹೆಸರು, ಕೀರ್ತಿ ಎಲ್ಲವೂ ಲಭಿಸಿವೆ. ಇದು ಹೊಸ ಆಟಗಾರರ ಆಕರ್ಷಣೆಗೂ ಕಾರಣವಾಗಿದೆ.

ಬಾಂಗ್ಲಾದಲ್ಲಿ ಕ್ರಿಕೆಟ್ ಅಕಾಡೆಮಿಗಳು, ತರಬೇತಿ ಶಿಬಿರಗಳು ಜಿದ್ದಿಗೆ ಬಿದ್ದಂತೆ ಆರಂಭವಾಗಿವೆ. ಕರ್ನಾಟಕದ ಸುನೀಲ್ ಜೋಶಿ, ಹಿರಿಯ ಕ್ರಿಕೆಟಿಗ ಮುಂಬೈನ ವಾಸೀಮ್ ಜಾಫರ್, ಶ್ರೀಲಂಕಾದ ನವೀದ್ ನವಾಜ್, ಆಸ್ಟ್ರೇಲಿಯಾದ ಶಾನ್ ವಿಲಿಯಮ್ಸ್, ಡೇವ್ ವಾಟ್ಮೋರೆ, ಜಾಮಿಯಾ ಸಿಡನ್ಸ್, ಇಂಗ್ಲೆಂಡ್‌ನ ಸ್ಟೀವ್ ರೋಡ್ಸ್ ಹೀಗೆ ಅನೇಕ ಅನುಭವಿಗಳನ್ನು ಕೋಚ್ ಆಗಿ ನೇಮಿಸಿಕೊಂಡು ಬಾಂಗ್ಲಾ ಕ್ರಿಕೆಟ್ ಮಂಡಳಿ ತಮ್ಮ ದೇಶದ ತಂಡವನ್ನು ಬಲಿಷ್ಠವಾಗಿ ಕಟ್ಟುವಲ್ಲಿ ಯಶಸ್ವಿಯಾಗಿದೆ. 31 ಟೆಸ್ಟ್, ಎರಡು ಏಕದಿನ, 260 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿದ ಅನುಭವಿ ವಾಸೀಮ್ ಜಾಫರ್ ಅವರನ್ನು ಬಾಂಗ್ಲಾ ಮಂಡಳಿಯ ತಮ್ಮ ಅಕಾಡೆಮಿಗೆ ಹೈ ಫರ್ಪಾಮೆನ್ಸ್ ಬ್ಯಾಟಿಂಗ್ ಕೋಚ್ ಆಗಿ ನೇಮಿಸಿಕೊಂಡಿತು.

ಕಾಲಕಾಲಕ್ಕೆ, ಅಗತ್ಯಕ್ಕೆ ತಕ್ಕಂತೆ ಕೋಚ್‌ಗಳು ಹಾಗೂ ಸೌಲಭ್ಯಗಳನ್ನು ಒದಗಿಸುತ್ತಿರುವ ಬಾಂಗ್ಲಾ ಕ್ರಿಕೆಟ್ ಮಂಡಳಿ, ಕ್ರಿಕೆಟ್ ಲೋಕದ ದೈತ್ಯ ಶಕ್ತಿಗಳ ಪ್ರಮುಖರನ್ನು ತನ್ನ ದೇಶಕ್ಕೆ ಕರೆಯಿಸಿ ತರಬೇತಿ ಕೊಡಿಸುತ್ತಿದೆ. ಎಲ್ಲರ ಅನುಭವಗಳ ಗುಚ್ಛ ಬಾಂಗ್ಲಾ 'ಹುಲಿ'ಗಳ ಹೆಜ್ಜೆಗಳನ್ನು ಸದೃಢಗೊಳಿಸುತ್ತಿದೆ. ದಶಕದಿಂದ ನಿರಂತರವಾಗಿ ಯಶಸ್ಸಿನ ಹಾದಿಯಲ್ಲಿ ಸಾಗುತ್ತಿರುವ ಬಾಂಗ್ಲಾದ ನಡೆ ದೊಡ್ಡ ಸಾಧನೆಯ ಕನಸು ನೇಯುತ್ತಿರುವ ಕೆನಡಾ, ಡೆನ್ಮಾರ್ಕ್, ಐರ್ಲೆಂಡ್, ಕೀನ್ಯಾ, ನೆದರ್ಲೆಂಡ್, ನೈಜೀರಿಯಾ, ಸ್ಕಾಟ್ಲೆಂಡ್ ದೇಶಗಳಿಗೂ ಪ್ರೇರಣೆಯಾಗಲಿದೆ.